ಬಡತನ ರೇಖೆಗಿಂತ ಕೆಳಗಡೆ ಇರುವ ನಮ್ಮ ಲಂಬಾಣಿ ಜನಾಂಗ ಗುಡ್ಡಗಾಡಿನಲ್ಲಿ ಇರುತ್ತಾರೆ. ಬಹಳ ಬಡತನ ಇರುವುದರಿಂದ ಸಣ್ಣ ಸಣ್ಣ ಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆ. ಅವು ತಾಂಡೂರು ಮುಖಾಂತರ ಹೈದರಾಬಾದ್‌ಗೆ ಹೋಗುತ್ತವೆ. ಬಡತನದ ಕಾರಣಕ್ಕೆ ಎರಡು-ಮೂರು ಸಾವಿರಕ್ಕೆ ಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರದವರು ತಕ್ಷಣವೇ ಮಾಹಿತಿ ತೆಗೆದುಕೊಂಡು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಈ ವಿಷಯ ಪತ್ರಿಕೆಯಲ್ಲಿ ಬಂದ ಮೇಲೆ ಗೊತ್ತಾಗಿದೆ. ಈ ಹಿಂದೆ ಇದು ಸರ್ಕಾರದ ಗಮನಕ್ಕೆ ಬಂದಿರಲಿಲ್ಲ. ನಾನು ಈ ಸುದ್ದಿ ತಿಳಿದಾದ ಮೇಲೆ ಎಷ್ಟು ಲಕ್ಷ ಕೊಡಬೇಕೋ ಅಷ್ಟು ಲಕ್ಷ ಕೊಟ್ಟು ಕ್ರಮ ಕೈಗೊಳ್ಳತಕ್ಕಂಥ ಕೆಲಸ ಮಾಡುತ್ತಿದ್ದೇನೆ. ಇದನ್ನು ಶೋಧನೆ ಮಾಡಬೇಕಾಗಿದೆ. ಇದು ನಮ್ಮ ಪತ್ರಿಕೆ ಆಧಾರದಮೇಲೆ ಕಂಡು ಬಂದಿದೆಯೇ ವಿನಃ ಸ್ಥಳೀಯವಾಗಿ ಸುದ್ದಿ ಬಂದಿಲ್ಲ. ಇವತ್ತು ನಮ್ಮ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಅಲ್ಲಿಗೆ ಹೋಗುತ್ತಿದ್ದಾರೆ. ಅವರು ಸ್ಥಳೀಯವಾಗಿ ಅಲ್ಲಿದ್ದು ಸಮಗ್ರವಾಗಿ ತನಿಖೆ ಮಾಡಿ ಒಂದು ವರದಿಯನ್ನು ನಾನು ತರಿಸುತ್ತೇನೆ. ಜಿಲ್ಲಾಧಿಕಾರಿಗಳು ಹೋಗಿಬರಬೇಕೆಂದು ಕೂಡ ನಾನು ಅವರ ಹತ್ತಿರ ಮಾತನಾಡಿದ್ದೇನೆ. ಅಲ್ಲಿಂದ ವರದಿ ಬಂದಮೇಲೆ ಪೂರ್ಣಪ್ರಮಾಣದಲ್ಲಿ ಏನು ಇದರ ಬಗ್ಗೆ ಮಾಹಿತಿ ಇರುತ್ತದೆ, ಅದನ್ನು ಮಾನ್ಯ ಸದಸ್ಯರ ಗಮನಕ್ಕೂ ನಾನು ತರುತ್ತೇನೆ.

ವಿಷಯ(iii): ಮೈಸೂರು ನಗರ ಪಾಲಿಕೆಯಲ್ಲಿ ಅವೈಜ್ಞಾನಿಕವಾಗಿ ಕಂದಾಯ ನಿಗದಿ ಮಾಡಿರುವ ಬಗ್ಗೆ.

ಅಧ್ಯಕ್ಷರು: ರಾಮದಾಸ್, ನೀವು ಹೇಳಿ.

+ಶ್ರೀ ಎ. ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಪ್ರಮುಖವಾಗಿ ಈ ಸದನದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮೂರನೇ ಬಾರಿ ಚರ್ಚೆಯಾಗುತ್ತ ಇರುವಂಥ ವಿಚಾರವನ್ನು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುತ್ತಿದ್ದಕ್ಕೆ ಬಯಸುತ್ತೇನೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ಈಗ ಸುಮಾರು ಒಂದು ಲಕ್ಷ 24 ಸಾವಿರ ಕಂದಾಯವನ್ನು ಕೊಡುತ್ತಿರುವವರು, ಟ್ಯಾಕ್ಸ್ ಪೇಯರ್ಸ್‌ಗೆ ಕಂದಾಯ ಪರಿಷ್ಕರಣ ಮಾಡುವಂಥಾದ್ದನ್ನು ರೆಂಟ್ ಆಕ್ಟ್‌ನ ಅಡಿಯಲ್ಲಿ ಅದನ್ನು ತರುವುದಕ್ಕೋಸ್ಕರ ಒಂದು ಯೋಜನೆಯನ್ನು ಮಾಡಿದ್ದರು. ಅದಕ್ಕೆ ಸಂಬಂಧಪಟ್ಟಹಾಗೆ ಅದರೊಳಗೆ ತಾರತಮ್ಯಗಳು ಇವೆ, ಅಧಿಕಾರಿಗಳು ಅದನ್ನು ದುರುಪಯೋಗ ಮಾಡಿಕೊಂಡಿದ್ದಾರೆಂದು ಹೇಳಿ ತಾವೇನೆ ಇಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ ಮತ್ತು ಮುಖ್ಯಮಂತ್ರಿಗಳು ಕೂಡ ಈ ವಿಚಾರದಲ್ಲಿ ಮಧ್ಯ ಪ್ರವೇಶ ಮಾಡಿ ನೂರು ಪರ್ಸೆಂಟ್‌ನಿಂದ ಸಾವಿರ ಪರ್ಸೆಂಟ್‌ವರೆಗೆ ಮಾಡಿರುವಂಥಾದ್ದನ್ನು, ಕೆಲವರಿಗೆ 30 ಪರ್ಸೆಂಟ್ ಕಡಿಮೆ ಮಾಡಿರುವಂಥ ಎಲ್ಲ ನಿದರ್ಶನಗಳನ್ನು ಕೂಡ ಅವರ ಮುಂದೆ ಇಡಲಾಗಿತ್ತು. ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಸ್ವಾಗತಾರ್ಹ ವಿಚಾರವಾಗಿ ಸರ್ಕಾರ ಈಗ ರೆಂಟ್ ಆಕ್ಟ್‌ಲ್ಲಿರುವಂಥ ಈ ಕಂದಾಯ ಪದ್ಧತಿಯನ್ನು ತೆಗೆದುಹಾಕಿ ಆಕ್ಚುಯಲ್ ರೆಂಟ್ ಮತ್ತು ಫೇರ್‌ಬಲ್

ರೆಂಟ್‌ನ್ನು ಕಂಡುಹಿಡಿಯುವುದು ಕಷ್ಟವಾಗುತ್ತದೆ, ಅಧಿಕಾರಿಗಳು ಇದನ್ನು ದುರುಪಯೋಗ ಮಾಡಿಕೊಳ್ಳುತ್ತಾರೆಂದು ಹೇಳಿ ಇದೇ ಸದನದಲ್ಲಿ ಕಳೆದಬಾರಿ ಕರ್ನಾಟಕ ರಾಜ್ಯ ಪೌರನಿಗಮ ವಿಧೇಯಕ-2000 ಎನ್ನುವಂಥಾದ್ದನ್ನು ತಂದು ಈ ರೆಂಟ್ ಆಕ್ಟ್‌ನ್ನು ಸ್ಟಾಂಪ್ ಆಕ್ಟ್‌ಗೆ ಬದಲಾಯಿಸಿ ಅದರ ಅಡಿಯಲ್ಲಿ ತಾವು ಕಂದಾಯ ನಿಶ್ಚಯ ಮಾಡಬೇಕೆಂದೇನು ಮಾಡಿದ್ದೀರಿ, ಅದು ಸದನದ ಸ್ವತ್ತಾಗಿದೆ ಮತ್ತು ಇದರ ಬಗ್ಗೆ ಚರ್ಚೆಯಾಗಿದೆ. ವೋಟಿಂಗ್ ಆಗಬೇಕು. ಹೀಗೆ ಇರುವಂಥ ಸಂದರ್ಭದಲ್ಲಿ ಮಂತ್ರಿಗಳು ತಡೆಯಾಜ್ಞೆ ಕೊಟ್ಟಿದ್ದರು. ಆದರೂ ಕೂಡ ಮೈಸೂರು ಮಹಾನಗರ ಪಾಲಿಕೆಯಲ್ಲಿ ಈ ಆಕ್ಟ್ ಆದನಂತರದಲ್ಲಿ ಕಂದಾಯವನ್ನು ನಿಗದಿಮಾಡಬೇಕು, ಅಲ್ಲಿಯವರೆಗೆ ಮಾಡಬಾರದು ಎಂದು ತಡೆಯಾಜ್ಞೆಯನ್ನು ಕೊಟ್ಟಿದ್ದು, ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿರುವಂಥಾದ್ದು ದಾಖಲೆಯಲ್ಲಿದೆ. ಆದರೆ ಈಗ ಇದ್ದಕ್ಕಿದ್ದ ಹಾಗೆ ಮೈಸೂರು ಮಹಾನಗರಪಾಲಿಕೆಯಲ್ಲಿ ಅವೈಜ್ಞಾನಿಕವಾಗಿ ಕಂದಾಯ ನಿಗದಿಮಾಡಿ ಮತ್ತೊಂದು ಬಾರಿ ಎಲ್ಲರಿಗೂ ನೋಟೀಸ್ ಜಾರಿ ಮಾಡುವ ಕೆಲಸವನ್ನು ಕೂಡ ಮಾಡಿದ್ದಾರೆ.

ಯಾರಿಗೆ ಜಾಸ್ತಿಯಾಗಿತ್ತೋ ಅದಕ್ಕೆ ಕೇವಲ 25 ಪರ್ಸೆಂಟ್. ನಿಮ್ಮೆಲ್ಲರಿಗೂ ಕೂಡ ಕಡಿಮೆ ಮಾಡಿದ್ದೇವೆಂದು ಹೇಳಿ, ನಾಮಕಾವಸ್ಥೆ 25 ಪರ್ಸೆಂಟ್ ಕಡಿಮೆ ಮಾಡಿರುವ ರೀತಿಯಲ್ಲಿ ಕೊಟ್ಟು, ಈ ರೀತಿಯಾದಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ, ಸೆಲ್ಫ್ ಅಸೆಸ್‌ಮೆಂಟನ್ನು ನಾವು ಸ್ವಾಗತ ಮಾಡುತ್ತೇವೆ. ಸರ್ಕಾರ ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿದೆ. ಆದರೆ, ಅಲ್ಲಿರುವಂಥ ಅಧಿಕಾರಿಗಳು, ಮನೆ ಮನೆಗೆ ಹೋಗಿ 4-5 ಸಾವಿರ ರೂಪಾಯಿಗಳ ಲಂಚ ತೆಗೆದುಕೊಂಡು ಕೆಲವರಿಗೆ 30 ಪರ್ಸೆಂಟ್ ಕಡಿಮೆ ಮಾಡಿದ್ದಾರೆ. ಮತ್ತೆ ಕೆಲವರಿಗೆ 100 ಪರ್ಸೆಂಟಿನಿಂದ 1000 ಪರ್ಸೆಂಟ್‌ವರೆಗೆ ಹೆಚ್ಚುವರಿ ಮಾಡಿರುವಂಥಾದ್ದು ಮಾಡಿರುವ ಬಗ್ಗೆ ನಿಮಗೆ ಎಲ್ಲಾ ದಾಖಲಾತಿಗಳನ್ನು ಕೊಟ್ಟಿದ್ದೇನೆ. ಎರಡನೆಯದು ಇದರ ಬಗ್ಗೆ ಮನವಿಯನ್ನು ಕೊಟ್ಟು, ಕೆಲವರು ಹಳೆಯ ಕಂದಾಯವನ್ನು ನಾವು ಕಟ್ಟುತ್ತೇವೆ, ವೈಜ್ಞಾನಿಕವಾಗಿ ಮಾಡಿಕೊಡಿ ಎಂದು ಕೇಳಿದಂಥವರಿಗೆ, ಅಲ್ಲಿಯ ಆಯುಕ್ತರು ಹಳೆಯ ಕಂದಾಯವನ್ನೇ ಪಡೆದು, ಹೊಸ ಕಂದಾಯ ನಿರ್ಧಾರವಾದ ನಂತರದಲ್ಲಿ ಕಟ್ಟಲಿಚ್ಛೆ ಅಫಿಡವಿಟ್‌ನ್ನು ಮಾಡಿಕೊಡಬೇಕೆಂದು ಹೇಳಿ, ಸಹಿ ಮಾಡಿರುವಂಥ ದಾಖಲಾತಿಗಳೆಲ್ಲವೂ ನಮ್ಮ ಹತ್ತಿರ ಇವೆ. ಔಟ್-ಲೇ ನಲ್ಲಿ ಹಳೆಯ ಕಂದಾಯವನ್ನು ಕಟ್ಟಿಸಿಕೊಂಡಿದ್ದೀರಿ. ಆದರೆ, ಈಗ ಮೂರು ದಿವಸಗಳಿಂದ ನಾವು ಹಳೆಯ ಕಂದಾಯವನ್ನು ಕಟ್ಟಿಸಿಕೊಳ್ಳುವುದಿಲ್ಲ, ಎಲ್ಲರೂ ಕೂಡ ಹೊಸ ಕಂದಾಯವನ್ನೇ ಕೊಡಬೇಕು. ನಿಮಗೆ ಕಟ್ಟುವಂಥ ಕಂದಾಯ ಕಡಿಮೆಯಾಗುತ್ತೆ ಎನ್ನುವುದಾದರೆ ಮುಂದಿನ ವರ್ಷಕ್ಕೆ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುತ್ತೇವೆ ಎಂದು ಹೇಳಿ, ಭ್ರಷ್ಟಾಚಾರವನ್ನು ನಿರ್ಮಾಣ ಮಾಡಿದ್ದಾರೆ. ಶೇಕಡ 25-30 ಭಾಗ ಈಗಾಗಲೇ ಹಳೆಯ ಕಂದಾಯವನ್ನು ಕಟ್ಟಿದ್ದಾರೆ. ಮತ್ತು ಕೆಲವರು ಹೊಸ ಕಂದಾಯವನ್ನು ಕಟ್ಟಿರುವಂಥ ಈ ವ್ಯವಸ್ಥೆ ಏನಿದೆ ಇದನ್ನು ತಕ್ಷಣದಲ್ಲಿಯೇ ನಿಲ್ಲಿಸಬೇಕು. ಈ ಸದನದಲ್ಲಿ ಹೇಳಿದ ರೀತಿಯಲ್ಲಿ ಹಳೆಯ ಕಂದಾಯವನ್ನು ತೆಗೆದುಕೊಳ್ಳುವುದಕ್ಕೆ ಪ್ರಾವಿಷನ್ ಮಾಡಿ. ಆ ನಂತರದಲ್ಲಿ ತಾವು ಈಗೇನು ಸ್ಟಾಂಪ್ ಆಕ್ಟ್‌ನ್ನು ತರುತ್ತಿದ್ದೀರಿ, ಅದಕ್ಕೆ ನಮ್ಮೆಲ್ಲರ ಸಹಕಾರವನ್ನು ಕೊಡುತ್ತೇವೆ. ಇದನ್ನು ವೈಜ್ಞಾನಿಕವಾಗಿ ತರುವಂಥ ದೃಷ್ಟಿಯಲ್ಲಿ ತರಬೇಕು. ಆ ನಂತರದಲ್ಲಿ ಹೊಸ ಕಂದಾಯವನ್ನು ಈ ವರ್ಷದಿಂದಲೇ ಜಾರಿಗೆ ಕೊಡುವುದಕ್ಕೆ ನಮ್ಮದೇನೂ

ಅಭ್ಯಂತರವಿಲ್ಲ. ದಯವಿಟ್ಟು ಈ ಅವೈಜ್ಞಾನಿಕವಾಗಿ ಕಂದಾಯ ವಸೂಲಿ ಮಾಡುತ್ತಿರುವುದನ್ನು ನಿಲ್ಲಿಸುವುದಕ್ಕೆ ಈ ಸದನದ ಮೂಲಕ ತಾವು ನಮಗೆ ಭರವಸೆಯನ್ನು ಕೊಡಬೇಕು. ಇಲ್ಲದೇ ಹೋದರೆ, ಇಡೀ ಮೈಸೂರು ನಗರದಲ್ಲಿ ಗೊಂದಲವಿರುತ್ತದೆ ಎಂಬ ವಿಚಾರವನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ): ಮೈಸೂರು ಮಹಾನಗರ ಪಾಲಿಕೆಯಲ್ಲಿ ಇವತ್ತು ಮನೆ ಕಂದಾಯವನ್ನು ಏನು ವಿಧಿಸುತ್ತಿದ್ದಾರೆ, ಇದು ಒಂದು ರೀತಿಯಲ್ಲಿ ಅವೈಜ್ಞಾನಿಕವಾಗಿ ಅನ್ ಸೈಂಟಿಫಿಕ್ ಆಗಿ ಅಸೆಸ್ ಮಾಡುತ್ತಿದ್ದಾರೆ. ಈಗ ತಮಗೇ ಗೊತ್ತಿರುವ ಹಾಗೆ ಸರ್ಕಾರ ಒಂದು ಬಿಲ್‌ನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದೆ. ಆ ಬಿಲ್ ಬರುವವರೆಗೆ ಈ ಅವೈಜ್ಞಾನಿಕವಾಗಿ ನಡೆಯುತ್ತಿರತಕ್ಕ ಈ ಕಲೆಕ್ಷನ್ ಆಫ್ ಟ್ಯಾಕ್ಸಸ್ ಏನಿದೆ, ಇದನ್ನು ತಕ್ಷಣವೇ ನಿಲ್ಲಿಸಬೇಕು. ಇಡೀ ಕರ್ನಾಟಕ ರಾಜ್ಯದಲ್ಲೇ ಒಂದು ಅಕ್ಸೆಪ್ಟೆಡ್ ಪಾಲಿಸಿಯನ್ನು ಜಾರಿಗೆ ತೆಗೆದುಕೊಂಡು ಬಂದು ಒಪ್ಪಿ, ಅದನ್ನು ಜಾರಿಗೆ ಕೊಡುವಂಥಾದ್ದು ಬಹಳ ಕ್ಷೇಮಕರ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇನ್ನೊಂದು ಏನೆಂದರೆ, ಬೆಂಗಳೂರು ನಗರದಲ್ಲಿ ಏನು ಸ್ವಯಂ ಘೋಷಿತ ಪದ್ಧತಿ ಇದೆ, ಆ ರೀತಿ ಮೈಸೂರು ನಗರದಲ್ಲಿ, ಈ ಪದ್ಧತಿಯನ್ನು ಇನ್ನೂ ಕೂಡ ಅಳವಡಿಸಿಕೊಂಡಿಲ್ಲ. ಅದನ್ನು ವೈಜ್ಞಾನಿಕವಾಗಿ ಅಳವಡಿಸಿಲ್ಲ. ಅದು ಬಹಳ ಅವೈಜ್ಞಾನಿಕವಾಗಿದೆ. ಇವೆಲ್ಲವೂ ಕೂಡ ಕೂಲಂಕಷವಾಗಿ, ಒಂದು ಪಾಲಿಸಿ ಪ್ರೋಗ್ರಾಂ ಆದಮೇಲೆ, ಇದನ್ನು ಜಾರಿಗೆ ಕೊಡುವಂತಾದ್ದು ಸೂಕ್ತ. ಇಲ್ಲದಿದ್ದರೆ, ಅಲ್ಲಿಯವರೆಗೆ ಕಂದಾಯ ಕೊಡುವಂಥ ಜನಗಳಿಗೆ ಬಹಳಷ್ಟು ತೊಂದರೆಯಾಗುತ್ತದೆಂಬ ಮಾತನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತೇನೆ. ಅಲ್ಲಿಯವರೆಗೆ ದಯಮಾಡಿ, ಮಾನ್ಯ ಮಂತ್ರಿಗಳು ಇದನ್ನು ಸ್ಥಗಿತಗೊಳಿಸಿ, ಸ್ಟೇ ಮಾಡಿಸಿ, ಆ ಬಿಲ್ ಪಾಸ್ ಮಾಡುವವರೆಗೆ ಇದನ್ನು ಜಾರಿಗೆ ಕೊಡಬಾರದೆಂದು ಹೇಳಿ, ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ): ಸನ್ಯಾಸ್ಯ ಅಧ್ಯಕ್ಷರೇ, ಮೈಸೂರು ನಗರ ಒಂದು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರತಕ್ಕ ನಗರ. ಅಲ್ಲಿಯ ಎಲ್ಲಾ ಜನರೂ ಶ್ರೀಮಂತರೇನಲ್ಲ. ಎ, ಬಿ, ಸಿ ಎಂದು ಮೂರು ಭಾಗವಾಗಿ ಮಾಡಿ, ಎ. ಎಂದರೆ ಶ್ರೀಮಂತರ, ಬಿ. ಎಂದರೆ ಮಧ್ಯಮ ವರ್ಗ, ಸಿ. ಎಂದರೆ ಬಡವರು ಎಂದು ಮಾಡಿರತಕ್ಕಂಥಾದ್ದು ತಪ್ಪು. ಅಲ್ಲಿರತಕ್ಕಂಥರೆಲ್ಲರೂ ಕೂಡ ಮಧ್ಯಮ ವರ್ಗದ ಜನರೇ. ಆ ಜನಗಳಿಗೆ ಕಂದಾಯ ಹೇಗೆ ಮಾಡಿದ್ದಾರೆಂದರೆ, ಬಾಡಿಗೆಕೊಟ್ಟು ವಾಸ ಮಾಡುವ ರೀತಿಯಲ್ಲಿ ಕಂದಾಯ ವಿಧಿಸಿದ್ದಾರೆ. ಜನ ವಾಚಾಮಗೋಚರವಾಗಿ ನಮ್ಮನ್ನು ಬೈಯುತ್ತಿದ್ದಾರೆ. ಮೈಸೂರು ನಗರದಲ್ಲಿ ನೆಲೆಯಾಗಿ ಬದುಕುವುದಕ್ಕೆ ಆಗುತ್ತಾ ಇಲ್ಲ. ಮತದಾರರು ಜನಪ್ರತಿನಿಧಿಗಳನ್ನು ಸಿಕ್ಕಾಪಟ್ಟೆ ಬೈಯ್ಯುತ್ತಿದ್ದಾರೆ. ಆದ್ದರಿಂದ, ನಾನು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೇಳಿಕೊಳ್ಳುತ್ತೇನೆ. ಈ ಅವೈಜ್ಞಾನಿಕವಾಗಿ ಮನೆಗಂದಾಯವನ್ನು ಹೆಚ್ಚಿಸಿರುವುದನ್ನು ತಡೆಹಿಡಿದು, ಅದನ್ನು ವೈಜ್ಞಾನಿಕವಾಗಿ ಸರಿಪಡಿಸಬೇಕೆಂದು ಹೇಳುತ್ತೇನೆ. ಇ.ಡಬ್ಲ್ಯು.ಎಸ್. ಮನೆ ಹೊಂದಿರುವವರು 250 ರೂಪಾಯಿ ಕಟ್ಟುತ್ತಿದ್ದವರಿಗೆ ಎರಡೂವರೆ ಸಾವಿರ ರೂಪಾಯಿಗಳನ್ನು ಹಾಕಿದ್ದಾರೆ. ದೊಡ್ಡ ದೊಡ್ಡ ಶ್ರೀಮಂತ ಬಂಗಲೆಗಳಿಗೆ ಲಂಚ ತೆಗೆದುಕೊಂಡು ಕಡಿಮೆ ಮಾಡಿದ್ದಾರೆ. ಇಂತಹ ಒಂದು ಪದ್ಧತಿ ಇದೆ. ಇದನ್ನು

ಏನಾದರೂ ಮಾನ್ಯ ನಗರಾಭಿವೃದ್ಧಿ ಸಚಿವರು ಸರಿಪಡಿಸದೇ ಹೋದರೆ, ಮುಂದಿನ ದಿನಗಳಲ್ಲಿ ನಾವು ಸದನದ ಬಾವಿಯಲ್ಲಿ ಮಲಗಬೇಕಾದ್ದು ಅನಿವಾರ್ಯವಾಗುತ್ತದೆ. ಖಂಡಿತವಾಗಿಯೂ ಆ ಜನಗಳ ಮುಂದೆ ನಾವು ತಲೆ ಎತ್ತಿ ತಿರುಗುವುದಕ್ಕಾಗುವುದಿಲ್ಲ. ಇವತ್ತು ಮೈಸೂರಿನಲ್ಲಿ ನಮ್ಮನ್ನು ಬಾಯಿಗೆ ಬಂದಹಾಗೆ ಬೈಯುತ್ತಿದ್ದಾರೆ. ನಾವು ಬಾವಿಯಲ್ಲಿ ಮಲಗದೇ ಹೋದರೆ ವಿಧಿಯೇ ಇಲ್ಲ, ಆ ತರಹ ಆಗಿದೆ. ದಯಮಾಡಿ ಇದನ್ನು ನಿಲ್ಲಿಸಿ, ನುರಿತ ಪರಿಣಿತರನ್ನು ಇಲ್ಲಿಂದ, ಆಲ್ಲಿಗೆ ಕಳುಹಿಸಿ ಸರಿಯಾದ ವ್ಯವಸ್ಥೆ ಮಾಡಿಸಬೇಕು. ಅಲ್ಲಿರುವವರಿಗೆ ಸ್ವಲ್ಪವೂ ಗೊತ್ತಿಲ್ಲ. ಕಂದಾಯವನ್ನು ಯಾವ ರೀತಿ ನಿಗದಿ ಮಾಡಬೇಕು ಎಂಬುದೇ ಗೊತ್ತಿಲ್ಲ. ದಯಮಾಡಿ, ನಾವು ತಲೆ ಎತ್ತಿಕೊಂಡು ತಿರುಗಬೇಕಾದರೆ, ಈ ಕಂದಾಯವನ್ನು ತಡೆಹಿಡಿದು, ಹೊಸ ಕಂದಾಯವನ್ನು ನಿಗದಿ ಮಾಡಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ಕಳಕಳಿಯ ಮನವಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಮಾನ್ಯ ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ಮೈಸೂರು ಕ್ಷೇತ್ರದ ಶಾಸಕರುಗಳಾದ ರಾಮದಾಸ್‌ರವರು, ಶಂಕರಲಿಂಗೇಗೌಡರು ಹಾಗೂ ಗುರುಸ್ವಾಮಿಯವರು, ಮೈಸೂರು ಪಟ್ಟಣದಲ್ಲಿ ನಾವು ಪ್ರಾಪರ್ಟಿ ಟ್ಯಾಕ್ಸ್ ಏನು ವಸೂಲಿ ಮಾಡುತ್ತಿದ್ದೇವೆ, ಅದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ ಮತ್ತು ಮನೆಗಂದಾಯ ಬಹಳ ಅವೈಜ್ಞಾನಿಕವಾಗಿದೆ, ಅದರಿಂದ ಶೋಷಣೆ ಕೂಡ ಆಗುತ್ತದೆ ಎಂದು ಹೇಳಿ, ಇವತ್ತು ನಮ್ಮನ್ನು ಕೂಡ ಕೇಳಿದ್ದಾರೆ. ಈ ಯೋಜನೆಯನ್ನು ತಂದಿರತಕ್ಕ ಉದ್ದೇಶ ತಮಗೂ ಕೂಡ ಗೊತ್ತು. ಈಗ ಮೈಸೂರು ಪಟ್ಟಣ ಬೆಳೆಯುತ್ತಿರತಕ್ಕ ಪಟ್ಟಣ. ಸುಮಾರು 6 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕ ಒಂದು ಪಟ್ಟಣ. ಆದರೆ, ದುರ್ದೈವದಿಂದ 1984 ರಿಂದ ಅದು ರಿವಿಜನ್ ಆಗಲಿಲ್ಲ. 1984 ರಿಂದ ಇಲ್ಲಿಯವರೆಗೆ ರಿವಿಜನ್ ಆಗಬೇಕಾಗಿತ್ತು. 5 ವರ್ಷಗಳೊಳಗೆ ರಿವಿಜನ್ ಆಗಬೇಕು. ಆದರೆ, ದುರ್ದೈವವೋ, ಸುದೈವವೋ ರಿವಿಜನ್ ಆಗಲೇ ಇಲ್ಲ. ಇದರಿಂದ ಸಂಬಂಧಪಟ್ಟ ಕಾರ್ಪೊರೇಷನ್‌ಗಳು ತಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸದೇ ಹೋದರೆ ಅಭಿವೃದ್ಧಿ ಕೆಲಸಕಾರ್ಯಗಳನ್ನು ಯಾವುದೇ ರೀತಿಯಲ್ಲೂ ಮಾಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಇವತ್ತು ನಮ್ಮ ಕಾರ್ಪೊರೇಷನ್ ಮೇಯರ್‌ರವರು, ಸದಸ್ಯರುಗಳಿಲ್ಲರೂ ಕೂಡಿ ತಂದಿರತಕ್ಕಂಥಾದ್ದು ಇದು. ಅವರು ಒಂದು ಸೆಲ್ಫ್ ಅಸೆಸ್‌ಮೆಂಟ್ ಪದ್ಧತಿಯನ್ನು ತಂದರೆ, ಸ್ವಲ್ಪ ಆದಾಯವನ್ನು ಹೆಚ್ಚು ಮಾಡಬಹುದು, ಅದರಿಂದ ಸಂಪನ್ಮೂಲಗಳನ್ನು ಹೆಚ್ಚು ಮಾಡಬಹುದು ಎಂಬ ಸದುದ್ದೇಶದಿಂದ ಮಾಡಿರಬಹುದೇ ಹೊರತು, ತೊಂದರೆಯನ್ನು ಕೊಡತಕ್ಕ ಉದ್ದೇಶ ಅಥವಾ ದುರುದ್ದೇಶ ಅದರಲ್ಲೇನೂ ಇಲ್ಲ. ಇವತ್ತು ಬೆಂಗಳೂರಿನಲ್ಲಿ ತಂದಿರತಕ್ಕ ಪದ್ಧತಿಯು ವೈಜ್ಞಾನಿಕವಾಗಿ ಆಗಿದೆ. ಪ್ರಾಪರ್ಟಿ ಟ್ಯಾಕ್ಸ್ ಕಲೆಕ್ಟ್ ಮಾಡತಕ್ಕವರು ಮತ್ತು ವಸೂಲ್ಮಾಡತಕ್ಕವರು ಯಾವುದೇ ರೀತಿಯಿಂದ ಎಕ್ಸ್‌ಪ್ಲಾಯಿಟ್ ಮಾಡಬಾರದು. ಮೇಲಾಗಿ ಮಧ್ಯವರ್ತಿಗಳು ಹಣವನ್ನು ದೋಚತಕ್ಕ ಕೆಲಸವನ್ನು ಮಾಡುತ್ತಾರೆ ಎಂಬುದು ಸರ್ಕಾರದ ಗಮನಕ್ಕೂ ಬಂದಮೇಲೆ ಅನಿವಾರ್ಯವಾಗಿ ಬದಲಾವಣೆಯನ್ನು ತರಬೇಕು. ಕಾನೂನಿಗೆ ತಿದ್ದುಪಡಿಯನ್ನು ತರಬೇಕು. ವೈಜ್ಞಾನಿಕವಾಗಿ ಪ್ರಾಪರ್ಟಿ ಟ್ಯಾಕ್ಸನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದ ಮುಂದೆ ಕಾನೂನು ಇದೆ. ಅದನ್ನು ಜಾರಿಗೊಳಿಸುವುದು ಕೂಡ

ಜೂನ್, ಜುಲೈ ತಿಂಗಳಲ್ಲಿ ಆಗಬೇಕೆಂದು ಸರ್ಕಾರದ ತೀರ್ಮಾನ ಮತ್ತು ಮುಖ್ಯಮಂತ್ರಿಗಳ ಉದ್ದೇಶವೂ ಕೂಡ ಅದೇ ಆಗಿದೆ. ಅದು ಬಂದರೆ, ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರ ಜೊತೆಗೆ ಕಾನೂನನ್ನು ಒಳ್ಳೆಯ ರೀತಿಯಿಂದ ಜಾರಿಗೆ ತರಬಹುದು. ಯಾವುದೇ ರೀತಿಯಿಂದ ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಇದರಲ್ಲಿ ಅವ್ಕಾಶವಿಲ್ಲ ಒಳ್ಳೆಯ ಸದುದ್ದೇಶ ಕೂಡ ಸರ್ಕಾರದ್ದು ಇದೆ. ಆ ದೃಷ್ಟಿಯಿಂದ ಇವತ್ತು ಮೈಸೂರಿನಲ್ಲಿ ಏನು ವಸೂಲಿ ಮಾಡುತ್ತಿದ್ದಾರೆ, ಅದು ಬಹಳ ಜನರಿಗೆ ತೊಂದರೆ ಎನ್ನತಕ್ಕಂಥಾದ್ದು ಅಭಿಪ್ರಾಯ ತಮ್ಮದಾಗಿದ್ದರೆ ಮತ್ತು ತಮ್ಮ ವಿಚಾರವನ್ನು ನಾನು ಒಪ್ಪುವುದಾದರೆ, ಇವತ್ತು ಸದ್ಯಕ್ಕೆ ವಸೂಲಿ ಮಾಡುವುದನ್ನು ಬೇಕಾದರೆ ನಿಲ್ಲಿಸೋಣ. ಸುಮಾರು 3-4 ತಿಂಗಳಾದ ಮೇಲೆ ಸಮಗ್ರವಾಗಿ ಕಾನೂನಿಗೆ ತಿದ್ದುಪಡಿಯನ್ನು ತಂದಾಗ ಮೈಸೂರು ಪಟ್ಟಣ ಕೂಡಿಸಿಕೊಂಡು ಎಲ್ಲಾ ಪಟ್ಟಣಗಳಿಗೆ ಬೇಕಾದರೆ ಅನುಸರಿಸೋಣ. ಸದ್ಯಕ್ಕೆ ತಾತ್ಕಾಲಿಕವಾಗಿ ಆ ಕರ ವಸೂಲಿ ಮಾಡುವುದನ್ನು ನಾನು ನಿಲ್ಲಿಸುತ್ತೇನೆ.

ಶ್ರೀ ಎ. ರಾಮದಾಸ್: ಸರ್ಕಾರ ಹೇಳಿದ್ದನ್ನು ನಾವು ಸ್ವಾಗತ ಮಾಡುತ್ತೇವೆ.

ಅಧ್ಯಕ್ಷರು: ಹಳೇ ಕಂದಾಯವನ್ನು ರೂಲ್ಸ್ ಪ್ರಕಾರ ಕೊಡಿ.

ಶ್ರೀ ಎ. ರಾಮದಾಸ್: ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅವೈಜ್ಞಾನಿಕವಾಗಿರುವಂತಾದ್ದನ್ನು ತಪ್ಪಿಸುತ್ತೇವೆಂದು ಹೇಳಿದ್ದೀರಿ, ನಾನು ಖಂಡಿತವಾಗಿಯೂ ಸ್ವಾಗತವನ್ನು ಮಾಡುತ್ತೇನೆ. ಅದೇ ಪ್ರಕಾರ ತಾವು ತಕ್ಷಣದಲ್ಲಿಯೇ ಆದೇಶವನ್ನು ಕೊಡಬೇಕು.

ವಿಷಯ(iv): ಶಿರಾ ಪಟ್ಟಣಕ್ಕೆ ಗಾಯಿತ್ರಿ ಜಲಾಶಯದಿಂದ ಕುಡಿಯುವ ನೀರಿನ ಸರಬರಾಜು.

ಶ್ರೀ ಸಿ. ಚೆನ್ನಿಗಪ್ಪ: ಶಿರಾ ಪಟ್ಟಣದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಿನ್ನೆ ಕೇಳಿದ್ದೆ. ಗಾಯಿತ್ರಿ ಜಲಾಶಯದಿಂದ ಶಿರಾ ಪಟ್ಟಣಕ್ಕೆ ನೀರನ್ನು ಕೊಡುವ ಬಗ್ಗೆ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಅದಕ್ಕೋಸ್ಕರವೇ ನಾನು ಹೇಳಿದ್ದು. ಒಂದು ದಿವಸ ರೈಸ್ ಮಾಡುವುದು, ಒಂದು ದಿವಸ ಉತ್ತರ ಕೊಡುವುದು ಬೇಡ. ಒಂದೇ ಸಲ ಉತ್ತರ ಬಂದಮೇಲೆ ರೈಸ್ ಮಾಡಬೇಕು.

ಶ್ರೀ ಸಿ. ಚೆನ್ನಿಗಪ್ಪ: ನಿನ್ನೆ ತಾವೇ ಅವ್ಪಣೆ ಕೊಡಿಸಿದ್ದೀರಿ.

ಅಧ್ಯಕ್ಷರು: ಅದಕ್ಕಾಗಿಯೇ ನಾನು ಹೇಳಿದ್ದು, ನಿನ್ನೆ ರೈಸ್ ಮಾಡುವುದು, ಇವತ್ತು ಉತ್ತರ ಕೇಳುವುದು ಬೇಡ. ಒಂದೇ ಸಲ ಉತ್ತರ ಬಂದಮೇಲೆ ತೆಗೆದುಕೊಳ್ಳೋಣ ಎಂದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ ತಾಂತ್ರಿಕ ಅನುಮೋದನೆ ಸಿಕ್ಕಿದೆ, ವರ್ಕ್ ಆರ್ಡರ್ ಸಿಕ್ಕಿದೆ, ಶಿರಾ ಪಟ್ಟಣದಲ್ಲಿ ಕೆಲಸ ಶುರು ಮಾಡಲು ಏನು ತೊಂದರೆ? ಕೆಲಸ ಶುರು ಮಾಡಿ ಸಲ್ಲಿಸಿದ್ದಾರೆ, ಅದರಲ್ಲಿ ಮಂತ್ರಿಗಳ ಕೈವಾಡ ಇದೆ.